ಅಸಲು ದಾವೆ ಸಂ. 428/2013 ಪಿಡಬ್ಲೂ.1

<u>ದಿನಾಂಕ 26-09-2018 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಪಾಟೀ ಸವಾಲುಃ- ಪ್ರತಿವಾದಿ 1 ಮತ್ತು 2 ರವರ ಪರವಾಗಿ ಶ್ರೀ ಆರ್.ಡಿ.ಪಿ. ವಕೀಲರಿಂದಃ</u>

1. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಉತಾರದಲ್ಲಿ ಈಗ ಯಾರ ಹೆಸರು ನಮೂದು ಇರುತ್ತದೆ ಹಾಗೂ ಎಷ್ಟು ಕ್ಷೇತ್ರದಲ್ಲಿ ಅವರ ಹೆಸರು ನಮೂದು ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ ಲಕ್ಷ್ಮಣ ಇತನು ತನ್ನ ಪಾಲಿನ ಆಸ್ತಿಯನ್ನು ರಾಮಚಂದ್ರ ಗುರುವನ್ನನವರು ಖರೀದಿ ಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತು 1 ನೇ ಪ್ರತಿವಾದಿಯ ಕಬ್ಜಾದಲ್ಲಿ ಇದೆ ಎಂದರೆ ಸರಿಯಲ್ಲ. ಸಾಕ್ಷಿ ನನ್ನ ಕಬ್ಜಾದಲ್ಲಿ ಇದೆ ಎಂದು ನುಡಿಯುತ್ತಾರೆ. ನನ್ನ ಕಬ್ಜಾದಲ್ಲಿ ಇದೆ ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಸದರಿ ಕಾಗದ ಪತ್ರಗಳನ್ನು ಹಾಜರುಪಡಿಸಲು ನನಗೆ ಯಾವುದೇ ಅಡಚಣೆ ಇರುವುದಿಲ್ಲ. 2 ನೇ ಪ್ರತಿವಾದಿಯ ಹೆಸರಿನಲ್ಲಿರುವ ಜಮೀನಿಗೆ ಸಂಬಂಧಪಟ್ಟ ಆತ ಪ್ರತ್ಯೇಕ ಕಬ್ಜಾದಲ್ಲಿದ್ದು ಬೆಳೆಗಳನ್ನು ಬೆಳೆಯುತ್ತಿರುತ್ತಾನೆಂದರೆ ಸಾಕ್ಷಿ ಈಗ ಬೆಳೆಯನ್ನು ಬೆಳೆಯುತ್ತಿರುತ್ತಾನೆ ಎಂದು ನುಡಿಯುತ್ತಾರೆ. ಸದರಿ ದಾವಾ ಸ್ವತ್ತಿನಲ್ಲಿ ಬಾಳೆ ಗಿಡ, ಗೊಂಜಾಳ, ಶೇಂಗಾ ಬೆಳೆ ಇರುತ್ತದೆ. 7 ಗುಂಟೆ ಜಾಗದಲ್ಲಿ ಬಾಳೆಗಿಡ ಬೆಳೆಯಲಾಗಿದೆ. ಎಷ್ಟು ಗಿಡ ಇದೆ ಎಂದು ನಾನು ಎಣಿಸಲು ಹೋಗಿರುವುದಿಲ್ಲ. ಯಾವ ಜಾತಿಯ ಬಾಳೆಗಿಡವನ್ನು 7 ಗುಂಟೆ ಜಮೀನಿನಲ್ಲಿ ಬೆಳೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ಏನು ಬೆಳೆ ಬೆಳೆಯಲಾಗಿದೆ ಎಂದು ನನಗೆ ಗೊತ್ತಿಲ್ಲದೆ ಇದ್ದುದ್ದರಿಂದ ನನಗೆ ಏನು ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ನಾನು ಹೋಗಿ ಬರುವಾಗ ನೋಡುತ್ತಿರುತ್ತೇನೆಂದು ನುಡಿಯುತ್ತಾರೆ.

2. ಸುಶೀಲಾ ಹಾಗೂ ಅವರ ಮಕ್ಕಳ ಮೇಲೆ ಪೋಲೀಸಿನವರಲ್ಲಿ ಪ್ರಕರಣ ದಾಖಲಾಗಿದ್ದವು ಎಂದು ನುಡಿಯುತ್ತಾರೆ. ಯಾವಾಗ ಪ್ರಕರಣ ದಾಖಲಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಪ್ರಕರಣ ದಾಖಲಾದ ಬಗ್ಗೆ ನಾನು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

3. ಸುಶೀಲಾರವರನ್ನು ಸುಶೀಲಾರವರ ಮಗಳು ಹಾಗೂ ಅಳಿಯ ತೋಟದ ಮನೆಯಲ್ಲಿ ಅವರನ್ನು ಬದುಕಿರುವವರೆಗೂ ಜೋಪಾನ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ನಾನು ಜೋಪಾನ ಮಾಡುತ್ತಿದ್ದೆ ಎಂದು ನುಡಿಯುತ್ತಾರೆ. ಆಸ್ತಿಯನ್ನು ಲಪಾಟಿಸುವ ಉದ್ದೇಶದಿಂದ ಮಗಳು ಹಾಗೂ ಅಳಿಯ ಜೋಪಾನ ಮಾಡಿದ್ದರು ಸಹ ನಾನು ಮಾಡಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆಕೆಗೆ ಸುಮಾರು 85 ವರ್ಷದ ಮೇಲೆ ವಯಸ್ಸು ಆಗಿತ್ತು ಎಂದರೆ ಸರಿ. ಆಕೆಗೆ ಆರಾಮ ಇರಲಿಲ್ಲ ಎಂದರೆ ಸಾಕ್ಷಿ ಧಮ್ಮು ಹಾಗೂ ಹೃದಯದ ಸಮಸ್ಯೆ ಇತ್ತು ಎಂದು ನುಡಿಯುತ್ತಾರೆ. ಸುಶೀಲಾರವರ ಮಗಳು ಹಾಗೂ ಅಳಿಯ ಶ್ರೀಧರ ಕುಲಕರ್ಣಿ ರವರ ಆಸ್ಪತ್ರಗೆ ತೋರಿಸುತ್ತಿದ್ದರು ಎಂದರೆ ಸರಿಯಲ್ಲ ಸಾಕ್ಷಿ ನಾನು ತೋರಿಸುತ್ತಿದ್ದೆ ಎಂದು ನುಡಿಯುತ್ತಾರೆ.

4. ಆಸ್ಪತ್ರೆಗೆ ತೋರಿಸುತ್ತಿದ್ದ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸುಶೀಲಾರವರು ತೋಟದ ಮನೆಯಿಂದ ಆಚೆ ಇಚೆ ಎಲ್ಲೂ ಹೋಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಸ್ವ-ಇಚ್ಛೆಯಿಂದ ನನ್ನ ಜೊತೆಯಲ್ಲೇ ಇದ್ದಳು ಎಂದು ನುಡಿಯುತ್ತಾರೆ. ಹೊಲದ ಮನೆಯಲ್ಲಿ ಇದ್ದಳು ಎಂದು ನುಡಿಯುತ್ತಾರೆ. ನಾನು ಹಿರೇಕೊಡಿಯ ನನ್ನ ತವರು ಮನೆಯಲ್ಲಿ ವಾಸವಿರುತ್ತೇನೆಂದರೆ ಸರಿ. ನಾನು ತೋಟದ ಮನೆಯಲ್ಲಿ ಸುಶೀಲಾರವರ ಜೊತೆಯಲ್ಲಿ ಇದ್ದೇನು ಅಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆಕೆಯ ಮತ್ತು ನನ್ನ ಸಂಬಂಧ ಚೆನ್ನಾಗಿದ್ದು ಆಕೆಯನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದೆ ಅಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 2012 ನೇ ಇಸವಿಯಲ್ಲಿ ಸುಶೀಲಾರವರು ಒಬ್ಬಾಕೆ ಹೊರಗೆ ಹೋಗಲು ದೈಹಿಕವಾಗಿ ಚೆನ್ನಾಗಿರಲಿಲ್ಲ ಎಂದರೆ ಸರಿಯಲ್ಲ. ಸುಶೀಲಾರವರಿಗೆ ವಯಸ್ಸಾಗಿದ್ದುದ್ದರಿಂದ ಆಕೆಯ ನೆನಪಿನ ಶಕ್ತಿ ಕಡಿಮೆಯಾಗಿತ್ತು ಎಂದರೆ ಸರಿಯಲ್ಲ. ಸುಶೀಲಾರವರು ಬದುಕಿರುವವರೆಗೂ ಸಹ

ಯಾವುದೇ ರೀತಿಯ ಕಾಗದ ಪತ್ರಗಳನ್ನು ಬರೆದು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಸುಶೀಲಾರವರು ಸಾಯುವ ಹೊತ್ತಿನಲ್ಲಿ ಕಾಗದವನ್ನು ಕೊಟ್ಟು ನನ್ನನ್ನು ಪೋಷಣೆ ಮಾಡಿದ್ದೀಯಾ ಕಾಗದವನ್ನು ವಕೀಲರಿಗೆ ಕೊಡು ಅಂತಾ ನನ್ನ ಬಳಿ ಕೊಟ್ಟಿದ್ದರು ಎಂದು ನುಡಿಯುತ್ತಾರೆ. ಕಾಗದವನ್ನು ಕೊಡುವ ಸಂದರ್ಭದಲ್ಲಿ ನಾನು ಮತ್ತು ವಕೀಲರು ಇದ್ದೇವು. ವಕೀಲರ ಹೆಸರು ನನಗೆ ಹೇಳಲು ಬರುವುದಿಲ್ಲ. ಸಾಕ್ಷಿ ಈಗ ನ್ಯಾಯಾಲಯದಲ್ಲಿ ಕುಳಿತಿರುವ ಪ್ರಸಾದ ಸದರಜೋಶಿರವರನ್ನು ನೋಡಿ ಅವರ ತಂದೆಯವರು ಎಂದು ನುಡಿಯುತ್ತಾರೆ. ಕಾಗದವನ್ನು ತದನಂತರ ವಕೀಲರು ತಯಾರು ಮಾಡಿರುತ್ತಾರೆಂದು ನುಡಿಯುತ್ತಾರೆ.

5. ಕಾಗದವನ್ನು ಕೊಡುವಾಗ ನೀನು ನನಗೆ ಉಸಾಬರಿ ಮಾಡಿದ್ದೀಯಾ ನನ್ನ ಹಿಸ್ಸೆಯನ್ನು ತೆಗೆದುಕೊ ಎಂದು ಕಾಗದವನ್ನು ಕೊಟ್ಟಿರುತ್ತಾರೆ. ಸಾಕ್ಷಿಗೆ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಪಾಲು ಆಗಿತ್ತಾ ಎಂದರೆ ಸಾಕ್ಷಿ ನ್ಯಾಯಾಲದಲ್ಲಿ **1/3** ಪಾಲು ಆಗಿದ್ದು **1/1** ನನಗೆ ಪಾಲು ಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ಸಾಕ್ಷಿ ಸುಶೀಲಾರವರು ಮೃತ್ಯು ಪತ್ರವನ್ನು ಬಿಟ್ಟು ಬೇರೆ ದಾಖಲೆಗಳನ್ನು ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಮೃತ್ಯು ಪತ್ರ ಕೊಟ್ಟ ಸಂದರ್ಭದಲ್ಲಿ ನನ್ನ ಸುಶೀಲಾಳ ಹಾಗೂ ವಕೀಲರನ್ನು ಬಿಟ್ಟು ಬೇರೆ ಯಾರು ಇರಲಿಲ್ಲ. ಮೃತ್ಯು ಪತ್ರವನ್ನು ಯಾರು, ಎಲ್ಲಿ ಮತ್ತು ಯಾವಾಗ ಬರೆದರು ಎಂಬುದರ ಬಗ್ಗೆ ತಮಗೆ ಮಾಹಿತಿ ಇದೆಯಾ ಎಂದರೆ ಸಾಕ್ಷಿ ಚಿಕ್ಕೋಡಿಯಲ್ಲಿ ಬರೆದಿರುತ್ತಾರೆಂದು ನುಡಿಯುತ್ತಾರೆ. ಮೃತ್ಯು ಪತ್ರವನ್ನು ಯಾವ ವಕೀಲರು ಬರೆದರು ಹಾಗೂ ಯಾರ ಮುಂದೆ ಬರೆದರು ಎಂದು ನನಗೆ ವೈಯಕ್ತಿಕವಾಗಿ ಮಾಹಿತಿ ಇರುವುದಿಲ್ಲ.

6. ಮೃತ್ಯು ಪತ್ರವನ್ನು ಬರೆಯುವ ಮೊದಲು ಸುಶೀಲಾರವರು ನನ್ನ ಮುಂದೆಯಾಗಲೀ ಅಥವಾ ಬೇರೆಯವರ ಮುಂದೆಯಾಗಲೀ ತಿಳಿಸಿದ ವಿಚಾರ ತಮಗೆ ಗೊತ್ತಿದೆಯಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಿಃ **17-12-2012** ರಂದು ಸುಶೀಲಾರವರು ನನಗಾಗಲೀ ಬೇರೆಯವರಿಗಾಗಲೀ ಯಾವುದೇ ಮೃತ್ಯು ಪತ್ರವನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ ಸುಶೀಲಾರವರ ನಿಧನದ ನಂತರ ಜಂಟಿಯಾಗಿ ಕಬ್ಜಾದಲ್ಲಿ ಇರುತ್ತೇನೆ ಅಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ತಾರಬಾಯಿ ಹಾಗೂ ಆಕೆಯ ಗಂಡ ಪೋಷಣೆ ಮಾಡುತ್ತಿರಲಿಲ್ಲ ನಾನೇ ಪೋಷಣೆ ಮಾಡುತ್ತಿದ್ದೇ ಅಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಮೃತ್ಯು ಪತ್ರ ನನಗೆ ಬರೆದು ಕೊಡದ ಕಾರಣ ನಾನೇ ಮಾಲೀಕಳಲ್ಲ ಹಾಗೂ ಕಬ್ಜಾದಲ್ಲಿ ಇಲ್ಲ ಎಂದರೆ ಸರಿಯಲ್ಲ. ತಾರಾಬಾಯಿ ಹಾಗೂ ಆಕೆಯ ಗಂಡ ಕಬ್ಜಾದಲ್ಲಿ ಇದ್ದರು ಸದರಿಯವರಿಗೆ ತ್ರಾಸು ಕೊಡುವ ಸಲುವಾಗಿ ನನ್ನ ಕಬ್ಜಾಗೆ ಹರಕತ್ತ್ ಮಾಡುತ್ತಿದ್ದಾರೆ ಅಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸುಶೀಲಾರವರು ಮೃತರಾಗುವ ಮೊದಲು ಮತ್ತು ತದನಂತರ ಪ್ರತಿವಾದಿಗಳೇ ಕಬ್ಜಾದಲ್ಲಿ ಇದ್ದುದ್ದರಿಂದ ನನ್ನನ್ನು ಕಬ್ಜಾದಿಂದ ಹೊರ ಹಾಕುವ ಪ್ರಶ್ನೆ ಇರುವುದಿಲ್ಲ ಎಂದರೆ ಸರಿಯಲ್ಲ.

7. ಮೃತ್ಯು ಪತ್ರದ ಆಧಾರದ ಮೇಲೆ ನಾನು ಸದರಿ ಪ್ರಕರಣವನ್ನು ಹೊರತುಪಡಿಸಿ ಪ್ರೊಬೇಟ್ ಪ್ರಮಾಣ ಪತ್ರವನ್ನು ತೆಗೆದುಕೊಳ್ಳಲು ಬೇರೆ ಯಾವುದೇ ಪ್ರಕರಣವನ್ನು ಸಲ್ಲಿಸಿರುವುದಿಲ್ಲ ದಾವೆಯನ್ನು ಸಲ್ಲಿಸಲು ನಾನು ಒಬ್ಬಾಕೆಯೇ ಮಾಹಿತಿ ಕೊಟ್ಟಿರುತ್ತೇನೆ. ನನ್ನ ಸಾಕ್ಷ್ಯ ಪ್ರಮಾಣ ಪತ್ರವನ್ನು ತಯಾರಿಸಲು ನಾನೇ ಮಾಹಿತಿ ಕೊಟ್ಟಿರುತ್ತೇನೆ. ನನ್ನ ಮಾಹಿತಿ ನನ್ನ ಪ್ರಮಾಣ ಪತ್ರದಲ್ಲಿ ಹೇಳಿದಂತೆ ಯಾರು ಯಾವ ದಾವೆ ಸಲ್ಲಿಸಿದ್ದಾರೆ ಹಾಗೂ ಮೇಲ್ಮನವಿ ಹಾಗೂ ಎಫ್.ಡಿ.ಪಿ. ಪ್ರಕರಣವನ್ನು ಸಲ್ಲಿಸಿದ್ದಾರೆ ಎಂಬುದರ ಬಗ್ಗೆ ನಮ್ಮ ವಕೀಲರಿಗೆ ಮಾಹಿತಿ ಕೊಟ್ಟಿರುವುದಿಲ್ಲ. ಈ ಪ್ರಕರಣದಲ್ಲಿ ಪ್ರತಿವಾದಿಗಳು ಏನು ತಕರಾರು ಅರ್ಜಿ ಸಲ್ಲಿಸಿದ್ದಾರೆಂದು ನನಗೆ ಮಾಹಿತಿ ಇರುತ್ತದೆ. ಏನು ತಕರಾರು ಸಲ್ಲಿಸಿದ್ದಾರೆಂದು ನನಗೆ ಹೇಳಲು ಬರುವುದಿಲ್ಲ. ಸದರಿ ಪ್ರಕರಣದಲ್ಲಿ ನಾನು ಯಾವ ಯಾವ ದಾಖಲೆಗಳನ್ನು ಹಾಜರುಪಡಿಸಿದ್ದೇನೆಂದು ನನಗೆ ಹೇಳಲು ಬರುವುದಿಲ್ಲ. ಸುಶೀಲಾರವರು ನನಗೆ ಯಾವುದೇ ಮೃತ್ಯು ಪತ್ರ ಬರೆದು ಕೊಟ್ಟಿಲ್ಲದೆ ಇದ್ದರೂ ಸಹ ನಾನು ವಕೀಲರು ಹಾಗೂ ಸಾಕ್ಷಿಗಳು ಸೇರಿ ಖೊಟ್ಟಿ ಮೃತ್ಯು ಪತ್ರವನ್ನು ತಯಾರಿಸಿ ಸುಳ್ಳು ಪ್ರಕರಣ ಸಲ್ಲಿಸಿದ್ದೇನೆಂದರೆ ಸರಿಯಲ್ಲ. ಖೊಟ್ಟಿ ಮೃತ್ಯು ಪತ್ರ ಅಂತಾ ಗೊತ್ತಿದ್ದರೂ ಸಹ ನ್ಯಾಯಾಲಯದಲ್ಲಿ

ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ನಾನು ಯಾವುದೇ ಕಾಗದ ಪತ್ರಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸುಶೀಲಾರವರೆ ಮೃತ್ಯು ಪತ್ರಕ್ಕೆ ಮಾಹಿತಿ ಕೊಟ್ಟರು ಹಾಗೂ ಅವರ ಮಾಹಿತಿಯಂತೆ ಮೃತ್ಯು ಪತ್ರವನ್ನು ತಯಾರಿಸಲಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಮೃತ್ಯು ಪತ್ರವನ್ನು ನಾನೇ ಬರೆದಿದ್ದೇನೆ ಅಂತಾ ನನಗೆ ಹೇಳಿದ್ದರೂ ಅಂತಾ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಯ ಕುರಿತು ನನಗೆ ಯಾವುದೇ ಮಾಲೀಕತ್ವದ ಹಾಗೂ ಕಬ್ಜಾದ ಹಕ್ಕು ಇಲ್ಲಾ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಲಾಗಿದೆ).

ಓ.ಹೆ.ಕೆ.ಸರಿ ಇದೆ.

(ಮಂಜುಳ ಬಿ.)
1 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ.ಗಳ ನ್ಯಾಯಾಲಯ, ಚಿಕ್ಕೋಡಿ.